**ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಬೇಲೂರು**

**ಃಸಿ.ಸಿ.ಸಂಖ್ಯೆಃ 427ಃ 2017ಃ**

ಫಿರ್ಯಾದುದಾರರು ಃ ರಮೇಶ್ ಬಿನ್ ಪುಟ್ಟೇಗೌಡ,
35 ವರ್ಷ ವಯಸ್ಸು, ಮೂಳೇನಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು.

ವಿರುದ್ದ

ಆರೋಪಿ ಃ ಗಂಗಮ್ಮ ಕೋಂ ಜವರಯ್ಯ, ವಯಸ್ಕರು,
ಜೈಭೀಮ್ ಬೀದಿ, 1ನೇ ವಾರ್ಡ್,
ಬೇಲೂರು ಟೌನ್, ಬೇಲೂರು.

- - -

**ಃ ಆರೋಪಣೆಯ ಸಾರಾಂಶ ಃ**

ದಿನಾಂಕಃ 31-12-2016 ರಂದು ಆರೋಪಿಯಾದ ನೀನು, ನಿನ್ನ ವ್ಯವಹಾರಕ್ಕೆ ಪಿರ್ಯಾದುದಾರರಿಂದ ರೂ.1,80,000/- ರೂ.ಗಳ ನಗದು ಹಣವನ್ನು ಪಡೆದು, ಸದರಿ ಸಾಲದ ಮರು ಪಾವತಿಗಾಗಿ ನೀನು ಪಿರ್ಯಾದುದಾರರಿಗೆ ದಿನಾಂಕಃ 31-01-2017 ಎಂದು ಮುಂದಿನ ದಿನಾಂಕವನ್ನು ನಮೂದಿಸಿ ಕೊಟ್ಟ ಕಳಸಪುರ ಶಾಖೆಯ ಕೆನರಾ ಬ್ಯಾಂಕ್‌ನ ಚೆಕ್ ಸಂಃ 708084 ನ ಚೆಕ್‌ನ್ನು ನೀಡಿದ್ದು, ಸದರಿ ಚೆಕ್‌ನ್ನು ಪಿರ್ಯಾದುದಾರನು ನಗದೀಕರಣಕ್ಕೆ ಹಾಜರುಪಡಿಸಿದ್ದು, ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲವೆಂದು ದಿಃ 03-04-2017 ರಂದು ಬ್ಯಾಂಕಿನವರು ನೀಡಿದ್ದ ಹಿಂಬರಹದ ಮೇಲೆ ನಿನಗೆ ದಿಃ 02-05-2017 ರಂದು ವಕೀಲರ ಮೂಲಕ ನೋಟೀಸ್‌ನ್ನು ನೊಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದು, ಸದರಿ ನೋಟೀಸ್ ನಿನಗೆ ದಿನಾಂಕಃ 16-05-2017 ರಂದು ಜಾರಿಯಾಗಿದ್ದು, ನಿನ್ನ ಖಾತೆಯಲ್ಲಿ ಹಣವಿಲ್ಲದಿದ್ದರೂ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*

ಉತ್ತರ ಃ

ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?
ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಯನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಡೀಕರಿಸುತ್ತೇನೆ.

ಸ್ಥಳಃಬೇಲೂರು
*ದಿನಾಂಕಃ 10-10-2019* ಜೆ.ಎಂ.ಎಫ್.ಸಿಃಬೇಲೂರು